## ಹುಡುಗರು ‘ಹುಡುಗೀರ ಆಟ’ ಆಡಿದ್ರೆ?

ಹುಡುಗರ ಮಿದುಳು ಬಲವಾಗಿರುವುದು ಆಟದ ‘ನಿಯಮ’ಗಳನ್ನು ಅರ್ಥ ಮಾಡಿಕೊಳ್ಳುವ, ವಿಷಯ ಕೇಂದ್ರಿತವಾಗಿ –ಇರುವುದರ ಬಗ್ಗೆ. ಆದರೆ ನಿಮ್ಮ ಮಗ ಹುಡುಗರ ಆಟ ಆಡದೆ ಹುಡುಗಿಯರ ಆಟ ಆಡಿದ ತಕ್ಷಣ ಅದು ‘ಅಸಹಜ’ ಅಲ್ಲ. ಸರಾಸರಿ 10 ಗಂಡು ಮಕ್ಕಳಲ್ಲಿ 6 ಮಕ್ಕಳ ಮಿದುಳು ‘ರಫ್ ಗೇಮ್ಸ್’ ಅಂದರೆ ರಭಸದ ಆಟಗಳನ್ನು ಇಷ್ಟಪಡುವ ರಚನೆ ಹೊಂದಿದ್ದರೆ, 2 ಮಕ್ಕಳಿಗೆ ಸಮತೋಲನದ ಮಿದುಳು, ಇನ್ನೆರಡು ಮಕ್ಕಳಲ್ಲಿ ‘ಮೃದು’ ಆಟದ ಪ್ರವೃತ್ತಿಯಿರುತ್ತದೆ. ಹಾಗಾಗಿ ನಿಮ್ಮ ಗಂಡು ಮಕ್ಕಳಿಗೆ ಎಲ್ಲ ರೀತಿಯ ಆಟಗಳನ್ನು ಆಡುವ ಅವಕಾಶ ನೀಡುವುದರಲ್ಲಿ ಯಾವ ಭಯವೂ ಬೇಡ. ಮುಂದೇನಾದರೂ ಅವರು ‘ಗೇ’ ಆದರೆ ಎಂದು ಯೋಚಿಸುವುದು ಕೂಡದು!

ಹುಡುಗರ ಆಟವೂ ಅಷ್ಟೆ, ಕಿಟಕಿ ಕಂಬಿಗಳನ್ನು ಹತ್ತುವುದು, ಮೆಟ್ಟಿಲುಗಳನ್ನು ಓಡುತ್ತಾ ಇಳಿಯುವುದು ಮುಂತಾದವು ಸಾಮಾನ್ಯ. ಇವು ಅವರ ಬೆಳವಣಿಗೆಗೆ ಸಹಜವೂ, ಅವಶ್ಯವೂ ಹೌದು. ಹಾಗಾಗಿ ಅವರಿಗೆ ‘ರಿಸ್ಕ್’ ತೆಗೆದುಕೊಳ್ಳಲು ಬಿಡಿ, ಅವರೊಡನೆ ಆಡಲು ನಿಮ್ಮ ಮಗಳನ್ನೂ ಪ್ರೋತ್ಸಾಹಿಸಿ. ಮತ್ತೆ ಮತ್ತೆ ಬೈಯ್ಯುವ, ‘ಅಯ್ಯೋ ಇನ್ನೂ ಮೇಲೆ ಹತ್ಬೇಡ, ಕೆಳಗೆ ತಕ್ಷಣ ಇಳಿ’ ಎಂದು ಕೂಗಬೇಡಿ. ಬದಲಾಗಿ ‘ಹೇಗೆ ಇಳಿಯಬೇಕೆಂದು ಯೋಜಿಸಿದ್ದೀಯಾ?’ ಎಂದು ಹೇಳಲು ಪ್ರಯತ್ನಿಸಿ. ಕುತೂಹಲಕಾರಿ ವಿಷಯವೆಂದರೆ ಅವರನ್ನು ತಂದೆ–ತಾಯಿ ತಡೆಯದೆ ಹಾಗೇ ಬಿಟ್ಟರೆ, ಅವರು ಹತ್ತುವ ಸಾಧ್ಯತೆ ಅಪ್ಪ –ಅಮ್ಮ ತಡೆದ ಹಂತಕ್ಕಿಂತ ಸ್ವಲ್ಪ ಮುಂದೆ ಅಷ್ಟೆ!



ಬೇಕಾಗಿರುವುದು ಬೇರೆಯವರೊಡನೆ ಆರಾಮವಾಗಿ ಮಾತನಾಡುವ, ಇತರರ ಅಭಿಪ್ರಾಯಗಳ ಬಗ್ಗೆ ಗಮನವೀಯುವ, ತನ್ನ –ಇತರರ ಭಾವನೆಗಳನ್ನು ಅರ್ಥ ಮಾಡಿಕೊಳ್ಳುವ ಗಂಡು ಮಕ್ಕಳು! ಹುಡುಗರು ಬರೀ ಹುಡುಗರಾಗಿರುವುದಿಲ್ಲ. ನಾವು ಅವಕಾಶ ಕೊಟ್ಟರೆ ಅವರು ‘ಮನುಷ್ಯ’ ರಾಗುತ್ತಾರೆ!

ಟೀಚರ್‌ಗಳಿಗೆ ಬೈಗುಳ–, ತರಗತಿಯಲ್ಲಿ ಅವಿಧೇಯತೆ ಗಂಡುಮಕ್ಕಳ ಬಗ್ಗೆ ಸಾಮಾನ್ಯ ದೂರು. ಶಾಲೆಯಲ್ಲಿ ಇಂಥ ಸಂದರ್ಭಗಳು ತಂದೆ– ತಾಯಿಗೆ ತರುವ ತಲೆನೋವು ಅಷ್ಟಿಷ್ಟಲ್ಲ. ‘ಹುಡುಗ ಎಂಬ ಕಾರಣಕ್ಕೇ ಇನ್ನೂ ಹೆಚ್ಚು ಬೈಯ್ಯುತ್ತಾರೆ’ ಎಂಬುದರಲ್ಲೂ ಸತ್ಯಾಂಶ ಇಲ್ಲದಿಲ್ಲ. ಹುಡುಗರಿಗೆ ಹೊಡೆಯದೆ ಬೆಳೆಸುವುದೇ ಸಾಧ್ಯವಿಲ್ಲ ಎಂಬುದು ಬಲವಾದ ನಂಬಿಕೆ!

ಆದರೆ ಶಿಸ್ತಿನ ನಿಯಮಗಳು, ಅಪ್ಪ –ಅಮ್ಮ– ಶಿಕ್ಷಕರು ವಿಧಿಸುವ ರೀತಿ, ಇವು ಹುಡುಗ–, ಹುಡುಗಿಯರಿಬ್ಬರಲ್ಲೂ ಕೆಲಸ ಮಾಡುವ ರೀತಿ ಒಂದೇ. ಕೆಟ್ಟ ಬೈಗುಳಗಳನ್ನು ಹುಡುಗರು ಕಲಿಯುವುದು ಸಾಮಾನ್ಯವಾಗಿ ಹಿರಿಯರನ್ನು ನೋಡಿ. ಹಾಗೆ ಮಾತನಾಡುವುದಕ್ಕೆ ಯಾವುದೇ ಶಿಕ್ಷೆ ಇರದೆ ಹೋದಂತೆ ಅದು ಅಭ್ಯಾಸವಾಗುತ್ತದೆ. ಹಾಗೆಯೇ ಅಪ್ಪ–ಅಮ್ಮ ಶಿಕ್ಷಕರ ಬಗೆಗೆ ಗೌರವದಿಂದ ಮಾತನಾಡುವುದು, ತರಗತಿಯಲ್ಲಿ ಸಮಸ್ಯೆಗಳು ಉಂಟಾದಾಗ ಆರಂಭದಲ್ಲಿಯೇ ಅದನ್ನು ನಿಭಾಯಿಸುವುದು ಅಗತ್ಯ.

### ನಿಮ್ಮ ಧೋರಣೆ ಬದಲಿಸಿ

★ ಆರೈಕೆ ಮಾಡುವುದು ಹುಡುಗಿಯರ ಕೆಲಸ! ಅಲ್ಲ, ಆರೈಕೆ ಮಾಡುವುದು ಒಂದು ಮಾನವೀಯ ಗುಣ. ಹಾಗಾಗಿ ಅಮ್ಮ ಮಗುವಿನ ‘ಫ್ರಾಮ್’ ತಳ್ಳುವುದರಷ್ಟೇ ಸಹಜ ಅಪ್ಪ ತಳ್ಳುವುದು. ಅಕ್ಕ–, ತಂಗಿ ತಳ್ಳುವಂತೆಯೇ ಅಣ್ಣ–, ತಮ್ಮನೂ ಮಾಡಬೇಕು.

★ ದೊಡ್ಡದು –ಹೆದರಿಸುವಂತದ್ದು ಹುಡುಗರಿಗೆ; ಸುಂದರವಾದದ್ದು, ಚಿಕ್ಕದ್ದು ಹುಡುಗಿಯರಿಗೆ. ಡೈನೋಸಾರ್ ಮಗನಿಗೆ, ಚಿಟ್ಟೆ ಹುಡುಗಿಯರಿಗೆ. ಇದು ಯಾವಾಗಲೂ ಹೀಗೇ ಆಗಬೇಕಿಲ್ಲ. ಇಬ್ಬರಿಗೂ ಎರಡೂ ಬೇಕು!

★ ಅಡಿಗೆ ಮನೆ ಹುಡುಗರಿಗಲ್ಲ, ಕಸ ಗುಡಿಸುವುದು ಹುಡುಗರಿಗೆ ಒಪ್ಪದ ಕೆಲಸ! ಇಲ್ಲ. ಇಬ್ಬರೂ ಕಲಿಯಲೇಬೇಕಾದ ಸ್ವಾವಲಂಬನೆ ಇದು.

★ ಹುಡುಗರು ಹುಡುಗರೇ ಆಗಿ, ಹುಡುಗಿಯರು ಹುಡುಗಿಯರೇ ಆಗಿ ಇಬ್ಬರ